**Volume XX : July to December – 2022, ISSN 2250-1711**
**Journal of Veda Samskrita Academy [Recognised in the UGC-CARE List]**

# ಪುರುಷಸೂಕ್ತ ಮತ್ತು ಶ್ರೀಸೂಕ್ತದಲ್ಲಿ ಪುರುಷಮತ್ತು ಪ್ರಕೃತಿ ತತ್ವದ ಚಿಂತನೆ

**Dr.Vinayak Namannavar**
Sr.Assistant Professor ,Ex Director of ASR Melukote.
Dept of Manuscriptology.
Karnataka Samskrit University.Bangalore.18
Ph No.9448641523

ಜಗತ್ತಿನ ತಂದೆತಾಯಿಗಳನ್ನು ಕೊಂಡಾಡುವ ಎರಡು ಸುಪ್ರಸಿದ್ಧ ಸೂಕ್ತಗಳು ಪುರುಷಸೂಕ್ತ ಮತ್ತು ಶ್ರೀಸೂಕ್ತ. ಪುರುಷಸೂಕ್ತ ನಾಲ್ಕು ವೇದಗಳಲ್ಲಿ ನಿರೂಪಿತವಾಗಿರುತ್ತದೆ.

(1) ಪುರುಷಸೂಕ್ತ ಋಗ್ವೇದದಲ್ಲಿ ಬಂದಿದೆ. 10ನೆಯ ಮಂಡಲದ 90ನೇ ಸೂಕ್ತ. ಇದರಲ್ಲಿ 16 ಮಂತ್ರಗಳಿವೆ.

(2) ಕೃಷ್ಣಯಜುರ್ವೇದದಲ್ಲಿ ತೈತ್ತಿರೀಯಾಣ್ಯಕದಲ್ಲಿ 3ನೆಯ ಪ್ರಪಾಠಕದ 12ನೆಯ ಅನುವಾಕ 18 ಮಂತ್ರಗಳಿವೆ.

(3) ಶುಕ್ಲಯಜುರ್ವೇದದಲ್ಲಿ ವಾರಸನೇಯ ಸಂಹಿತೆಯಲ್ಲಿ 31ನೆಯ ಅಧ್ಯಾಯ. ಒಟ್ಟು 20 ಮಂತ್ರಗಳಿವೆ.

(4) ಕಾಣ್ವ ಸಂಹಿತೆಯಲ್ಲಿ 35ನೆಯ ಅಧ್ಯಾಯ ಈ ರೀತಿ ನಾಲ್ಕು ವೇದಗಳಲ್ಲಿ ಪುರುಷಸೂಕ್ತ ಪ್ರತಿಪಾದಿತವಾಗಿರುತ್ತದೆ. ಪುರುಷೋ–ತ್ತಮನಾದ ಶ್ರೀನಾರಾಯಣನನ್ನು ಪ್ರತಿಪಾದಿಸುವ ಸೂಕ್ತವೇ ಪುರುಷಸೂಕ್ತವೆನಿಸಿದೆ. ಶ್ರೀಮನ್ಮಧ್ವಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲಿ ಈ ರೀತಿಯಾಗಿ ವಿವರಿಸಿದ್ದಾರೆ. ಮತ್ತು ಪುರುಷಸೂಕ್ತಕ್ಕೆ ನಾರಾಯಣನೇ ಪ್ರತಿಪಾದ್ಯನೆಂದು ಸಮರ್ಥಿಸಿರುತ್ತಾರೆ.

(1) ಹೇ ನಾರದ, ಪುರುಷಸೂಕ್ತವು ಯಾವರೀತಿ ವಿಷ್ಣುವನ್ನೇ ಹೇಳುವುದೋ, ಹಾಗೆ ಉಳಿದ ವೇದಗಳಾಗಲಿ, ವೇದಾಂತ ಗಳಾಗಲಿ ಸ್ಪಷ್ಟವಾಗಿ ಹೇಳುವುದಿಲ್ಲ, ಎಂಬುದಾಗಿ ಬೃಹತ್ ಸಂಹಿತೆಯಲ್ಲಿ ಹೇಳಿದೆ.1

(2) ಹೇ ಮಹಾರಾಜ! ಪುರುಷಸೂಕ್ತದಲ್ಲಿ ಹೇಗೆ ವಿಷ್ಣುವೊಬ್ಬನೆ ಹೇಳಲ್ಪಡುವನೋ, ಹಾಗೆಯೇ ಆ ಕಾಲದಲ್ಲಿ ತ್ರೇತಾಯುಗದಲ್ಲಿ ರಾಮನೊಬ್ಬನ ಕುರಿತಾದ ವಿಚಾರ ಮಾಡಲ್ಪಡುತ್ತಿತ್ತು ಎಂಬುದಾಗಿ ಸ್ಕಂದಪುರಾಣ ವಚನವು ತಿಳಿಸುತ್ತದೆ.2

(3) ಪೂರ್ಣನಾದ್ದರಿಂದ "ಪುರುಷ"ನೆಂದು ಕರೆಯಲ್ಪಡುವ ವಿಷ್ಣುವಿಗಿಂತಲೂ ಶ್ರೇಷ್ಠವಾದ ವಸ್ತು ಯಾವುದೂ ಇಲ್ಲ ಎಂಬುದಾಗಿ ಕಾಠಕೋಪನಿಷತ್ತಿನಲ್ಲಿ ಹೇಳಿದೆ.3

(4) ಪುರುಷನ ದೆಸೆಯಿಂದ ಜಗತ್ ಸೃಷ್ಟಿಯನ್ನು ಹೇಳಿದ ಪ್ರಯುಕ್ತ ಪುರುಷಸೂಕ್ತದಲ್ಲಿರುವ ಪುರುಷಪದವು ನಾರಾಯಣ ವಾಚಕ ವಾಗಿದೆ.4 ಹೀಗಾಗಿ ಪುರುಷಸೂಕ್ತಪ್ರತಿಪಾದ್ಯ ನಾರಾಯಣನು ಎಂಬುದು ಪ್ರಮಾಣಾಂತರಗಳಿಂದ ವಿಹಿತವಾಗಿರುತ್ತದೆ. ಭಗವಂತನಿಗೆ ಮೂರು "ಪುರುಷ" ನಾಮಕ ರೂಪಗಳಿವೆ.

(1) ಬ್ರಹ್ಮಾಂಡದ ಸೃಷ್ಟಿಗಿಂತಲೂ ಮೊದಲು ಬ್ರಹ್ಮಾಂಡದ ಸೃಷ್ಟಿಗೆ ಕಾರಣವಾದ ಮಹತ್ತತ್ವದ ಸೃಷ್ಟಿ ನಡೆಸುವ ಪುರುಷರೂಪ ಮೊದಲನೆಯದು.

(2) ಬ್ರಹ್ಮಾಂಡದ ಸೃಷ್ಟಿಯು ಬಳಿಕ ಬ್ರಹ್ಮಾಂಡದಲ್ಲಿ ವ್ಯಾಪಿಸಿರುವ ಪುರುಷರೂಪ ಎರಡನೆಯದು.

(3) ಬ್ರಹ್ಮಾಂಡದೊಳಗೆ ಸೃಷ್ಟರಾದ ಪ್ರತಿಯೊಬ್ಬ ಪುರುಷರ ಹೃದಯದಲ್ಲಿ ನೆಲೆಸಿರುವ ಪುರುಷರೂಪ ಮೂರನೆಯದು. ಈ ಮೂರು ಪೌರುಷ ರೂಪಗಳನ್ನು ತಿಳಿದವರು ಮುಕ್ತರಾಗುತ್ತಾರೆಂದು ಮತ್ಸ್ಯಪುರಾಣದಲ್ಲಿ ಹೇಳಿದೆ.5 ಭಗವಂತನ ಪುರುಷ ತತ್ವಗಳು ಮೂರು ರೀತಿಯಾಗಿದೆ.

(1) ಬ್ರಹ್ಮದೇವರ ಪರಕಾಲ ಅಂದರೆ ಶ್ರೀಹರಿಯ ನಿಮೇಷವೆಂಬ ಕಾಲದ ಕೊನೆಯಲ್ಲಿ ಶ್ರೀಹರಿಯು ತನ್ನ ಇಚ್ಛೆಯಿಂದ ಕಾಲವನ್ನೂ ಜೀವರ ಅದೃಷ್ಟವನ್ನು ಪ್ರಕೃಯನ್ನು ತನ್ನ ಶಕ್ತಿಯಿಂದಲೇ ವಿಶೇಷವಾಗಿ ಅನುಗ್ರಹಿಸುವನು. ಅಂದರೆ ಅವುಗಳ ಶಕ್ತಿಯನ್ನು ವ್ಯಕ್ತವಾಗು–ವಂತೆ ಮಾಡುವನು. ಅನೇಕ ರೂಪಗಳಿಂದ ವಿಹರಿಸುವ ಶ್ರೀಹರಿಯು ಅವುಗಳನ್ನು ಉಪಯೋಗಿಸಿ ಕೊಂಡು ಸೃಷ್ಟಿಗೆ ತೊಡಗುವನು. ಹಾಗೂ ವಿಕಾರಹೊಂದುವ ಸ್ವಭಾವವುಳ್ಳ ಮಹತ್ತತ್ವವು ಸ್ಪಷ್ಟವಾಯಿತು. ಈ ಸೃಷ್ಟಿ ನಡೆಸಿದ ಪುರುಷರೂಪ ಮೊದಲನೆಯದು.6

(2) ಬ್ರಹ್ಮಾಂಡದ ಹೊರಗಿನ ಸೃಷ್ಟಿಯಾದ ನಂತರ ಸ್ಪಷ್ಟವಾದ ತತ್ವಗಳೆಲ್ಲವೂ ಒಂದೊಂದು ಬ್ರಹ್ಮಾಂಡವನ್ನು ನಿರ್ಮಿಸಲಾರದಾದವು. ಆಗ ಭಗವಂತನನ್ನು ಈ ತತ್ವಾಭಿಮಾನಿದೇವತೆಗಳು ಸ್ತೋತ್ರಮಾಡಿ ಬೇಡಿಕೊಂಡರು. ಪ್ರಸನ್ನನಾದ ಭಗವಂತನು ತನ್ನ ಚೇಷ್ಟರ ರೂಪದಿಂದ ಆ ತತ್ವಗಳಲ್ಲಿ ಪ್ರವೇಶ ಮಾಡಿದನು. ಮತ್ತು ಅವುಗಳ ಶಕ್ತಿಯನ್ನು ಪ್ರಚೋದಿಸಿದನು. ಆಗ ಪಂಚಭೂತಗಳ ಪರಸ್ಪರ ಸಂಯೋಗದಿಂದ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಇದೇ ಜೀವರಿಗೆ ಸಂಸಾರರೂಪ ಭಯವನ್ನುಂಟು ಮಾಡುವ ಮನೆಯಾಗಿದೆ.

ಹೀಗೆ ಶ್ರೀಹರಿಯು ಕಾಲ, ಕರ್ಮ, ಸ್ವಭಾಗಳಿಲ್ಲದ್ದು. ಶಕ್ತಿಪ್ರದನಾದ್ದರಿಂದ ದೇವರ ವಿಲಕ್ಷಣನಾಗಿದ್ದಾನೆ. ಹೀಗೆ ಬ್ರಹ್ಮಾಂಡವನ್ನು ಸೃಷ್ಟಿಸಿ ಅದರಲ್ಲಿ ವ್ಯಕ್ತನಾದ ಶ್ರೀಹರಿಗೆ ಪುರುಷನೆಂದು ಹೆಸರು. ಇದು ಎರಡನೆಯ ಪುರುಷರೂಪವಾಗಿದೆ.

(3) ಭಗವಂತನಾದ ಶ್ರೀಹರಿಯು ಸಕಲ ಪ್ರಾಣಿಗಳಿಗೂ ಪಂಚಭೂತಾತ್ಮಕವಾದ ದೇಹಗಳನ್ನು ನಿರ್ಮಿಸಿ ಆ ದೇಹಗಳಲ್ಲಿ ಇಂದ್ರಿಯಗಳ

ವ್ಯಾಪಾರ ಮಾಡಿಸುವುದಕ್ಕಾಗಿ ಆ ಸಕಲ ಪ್ರಾಣಿಗಳ ಶರೀರಗಳನ್ನು ಒಂದು ರೂಪದಿಂದ ವ್ಯಾಪಿಸಿರುವುದಲ್ಲದೆ ಅವುಗಳ ಹೃದಯ–ದಲ್ಲಿಯೂ ಬಿಂಬರೂಪಿಯಾಗಿ ಇರುತ್ತಾನೆ. ಹೀಗೆ ಸಕಲ ಪ್ರಾಣಿಗಳ ಹೃದಯದಲ್ಲಿ ನೆಲೆಸಿರುವುದರಿಂದಲೇ ಅವನಿಗೆ ಪುರುಷನೆಂಬ ಹೆಸರು. ಇದು ಭಗವಂತ ಮೂರನೆಯ ರೂಪವಾಗಿರುತ್ತದೆ. ಹೀಗೆ ಪುರುಷರೂಪಿಯಾದ ಭಗವಂತನೂ ವಿಷ್ಣುವಿನ ಅವತಾರ

(1) ಮೊದಲನೇ ಅವತಾರ ಪುರುಷ. ಮಹದಾದಿ ತತ್ವಗಳನ್ನೂ ಬ್ರಹ್ಮಾಂಡವನ್ನು ಸೃಜಿಸಿದ್ದಾನೆ.

(2) ಎರಡನೆ ಅವತಾರ ಪುರುಷ. ಬ್ರಹ್ಮಾಂಡವನ್ನು ಪ್ರವೇಶಿಸಿ ಬ್ರಹ್ಮಾಂಡವನ್ನು ನಿಯಂತ್ರಿಸುತ್ತಾನೆ.

(3) ಮೂರನೆಯ ರೂಪ ಚತುರ್ಮುಖ. ಬ್ರಹ್ಮನ ವಿರಾಟ್ ಶರೀರದಲ್ಲಿ ಮೂರನೆಯ ಪುರುಷಾವತಾರ ತಾಳಿ ನೆಲೆಸಿದ್ದಾನೆ.7 "ಪುರುಷ" ಎಂಬುದಕ್ಕೆ ಅನೇಕ ಅರ್ಥ ವಿಶೇಷಗಳಿದ್ದು ಅವು ಈ ಕೆಳಗಿನಂತೆ ವಿವರಿಸಲಾಗಿದೆ. ಭಗವಂತನ "ಪುರುಷ" ನಾಮದ ಅರ್ಥ ವಿಶೇಷಗಳು

(1) ಜೀವಾತ್ಮರ ಶರೀರಗಳಲ್ಲಿ ಹೃದಯವೆಂಬ ಪಟ್ಟಣದಲ್ಲಿ ನೆಲೆಸಿರುವವನು.1

(2) ಎರಡು ಕಾಲುಗಳುಳ್ಳ, ನಾಲ್ಕು ಕಾಲುಗಳುಳ್ಳ ಶರೀರಗಳನ್ನು ನಿರ್ಮಿಸಿದ ಭಗವಂತನು ಹಕ್ಕಿಯ ರೂಪದಿಂದ ಅಂತಹ ಶರೀರಗಳನ್ನು ಪ್ರವೇಶಿಸಿದನು. ಆ ಎಲ್ಲ ಶರೀರಗಳಲ್ಲೂ ಹೃದಯ ಪಟ್ಟಣದಲ್ಲಿರುವ ಪ್ರಯುಕ್ತ ಅವನು ಪುರುಷ ಎಂದೇ ಪ್ರಸಿದ್ಧ–ನಾಗಿರುವನು.2

(3) ನವದ್ವಾರಗಳಿಂದ ಕೂಡಿದ ಶರೀರದಲ್ಲಿ ಮಹಾತ್ಮನಾದ ಇವನು ವ್ಯಾಪಿಸಿ ಇರುವುದರಿಂದ ಇವನಿಗೆ "ಪುರುಷ" ಎಂದು ಹೆಸರು.3

(4) ಅಸಾಧಾರಣ ಪುರುಷತ್ವವುಳ್ಳವನು.4

(5) ಸೃಷ್ಟಿಯ ಮೊದಲಿನಿಂದಲೂ ಇರುವವನು.5

(6) ಅತ್ಯಧಿಕವಾದ ಜಗತ್ ಸೃಷ್ಟಿಯೇ ಮೊದಲಾದ ಚಟುವಟಿಕೆಯುಳ್ಳವನು.—6

(7) ಅನೇಕಾನೇಕ ದೈತ್ಯರನ್ನು ಸಂಹರಿಸುವವನು.7

(8) ಮೋಕ್ಷರೂಪವಾದ ಪೂರ್ಣಲವನ್ನಾಗಲೀ, ಪೂರ್ಣವೆನಿಸಿರುವ ತನ್ನನ್ನೇ ಆಗಲಿ ನೀಡುವವನು.8

(9) ಭಗ ಎನಿಸುವ ಸಮಗ್ರ ಐಶ್ವರ್ಯ ಮೊದಲಾದ ಆರು ಗುಣಗಳನ್ನು ಪೂರ್ಣವಾಗಿ ಹೊಂದಿರುವವನು.9

(10) ಜೀವರ ದೇಹವನ್ನು ಬೆಚ್ಚಗೆ ಇಡುವವನು.10

(11) ಭಕ್ತರಿಗೆ ತುಂಬಾಲ ನೀಡುವವನು.11

(12) ಗುಣಪೂರ್ಣನಾಗಿರುವವನು.12

(13) ಪ್ರಜೆಗಳಿಂದ ಜಗತ್ತನ್ನು ತುಂಬಿಸುವವನು.13

(14) ಎಲ್ಲರನ್ನೂ ಪಾಲಿಸುವವನು.14

(15) ಭಕ್ತರನ್ನು ಜ್ಞಾನಭಕ್ತ್ಯಾದಿಗಳಿಂದ ತುಂಬಿಸುವವನು ಮತ್ತು ಅವನ ಅವಿದ್ಯಾಕಾಮಾದಿ ದೋಷಗಳನ್ನು ನಾಶಗೊಳಿ– ಸುವವನು.15

(16) ಭಕ್ತರ ಸರ್ವಪಾಪಗಳನ್ನು ಪರಿಹರಿಸುವವನು.16

(17) ಪೂರ್ಣನಾದ ತನ್ನನ್ನು ಚೆನ್ನಾಗಿ ಬಲ್ಲವನು.17

(18) ಪೂರ್ಣಗಳಾದ ಪ್ರೇರಕತ್ವ ಹಾಗೂ ವ್ಯಾಪ್ತಿವುಳ್ಳವನು.18 (ಭಗವಂತನ ಪ್ರಸಿದ್ಧವಾದ ವಿಷ್ಣುನಾಮದ ಷಕಾರವು ಅವನ ಪ್ರೇರಕತ್ವ ಹಾಗೂ ವ್ಯಾಪ್ತಿಗಳನ್ನು ತಿಳಿಸುವುದು.) ಹದಿನಾರು ತತ್ತ್ವಗಳಿಂದ ಸಂಪನ್ನವಾಗಿರುವ, ಒಂಭತ್ತು ಬಾಗಿಲುಗಳುಳ್ಳ ಪುಣ್ಯವಾದ ಪುರವನ್ನು (ಶರೀರವನ್ನು) ವ್ಯಾಪಿಸಿ ಮಹಾನ್ ಎನಿಸಿರುವ ಭಗವಂತನು ಆತ್ಮ ಅಂತರಾತ್ಮಾ ಎಂಬ ಎರಡು ರೂಪಗಳಿಂದ ಪವಡಿಸಿದ್ದಾನೆ. ಆದುದರಿಂದ ಅವನ್ನು "ಪುರುಷ"ನೆಂಬ ಹೆಸರಿನಿಂದ ಕರೆಯುತ್ತಾ.19 (ಪುರಿ ಶೇತೇ ಇತಿ ಪುರುಷಃ) ಬ್ರಹ್ಮಸೂತ್ರಗಳ ಗುಹಾಧಿಕರಣದಲ್ಲಿ ಇದನ್ನು ಸ್ಪಷ್ಟ ಪಡಿಸಿದ್ದಾರೆ. ಆ ಪುರುಷರು ಜರಾಮರಣಗಳಿಂದ ರಹಿತನಾದವನು. ಮೂರ್ತಾಮೂರ್ತಸ್ವರೂಪಗಳಿಗೂ ಪ್ರೇರಕನು, ಸರ್ವವ್ಯಾಪಕನು, ಸರ್ವಜ್ಞತ್ವವೇ ಮೊದಲಾದ ಗುಣಗಳಿಂದ ಸಂಪನ್ನನಾಗಿರುವವನು. ಸೂಕ್ಷ್ಮಾತಿಸೂಕ್ಷ್ಮನು, ಸರ್ವಪ್ರಾಣಿಗಳಿಗೂ ಮತ್ತು ಸತ್ತ್ವಾದಿಗುಣಗಳಿಗೂ ಆಶ್ರಯಸ್ಥಾನನಾಗಿರುವವನು ಆಗಿದ್ದಾನೆ.20

ಇಲ್ಲಿ "ಜನ್ಮಮೃತ್ಯುಜರಾತಿಗಃ' ಎಂಬ ಶ್ರೀವಿಷ್ಣುಸಹಸ್ರನಾಮದ ಉಕ್ತಿಯನ್ನು ಸರ್ವಾವಸ್ಥಾಪ್ರೇರಕಃ ಶ್ರೀಅಣುಭಾಷ್ಯದ ಉಕ್ತಿಯನ್ನು ಯಃ ಸರ್ವಜ್ಞಃ ಸರ್ವವಿತ್ (ಶ್ರುತಿ) ಮೊದಲಾದ ಉಕ್ತಿಗಳನ್ನು ಸ್ಮರಿಸಿಕೊಳ್ಳಬೇಕು. ಈ "ಪುರುಷ" ರೂಪೀ ಭಗವಂತನು ಶ್ರವಣೇಂದ್ರಿಯಕ್ಕೆ ಜ್ಞೇಯಭೂತವಾದ ಶಬ್ದವನ್ನು ಕೇಳುವಂತೆ ಮಾಡುತ್ತಾನೆ. ಹಾಗೆಯೇ ಚಕ್ಷುರಿಂದ್ರಿಯಕ್ಕೆ ವಿಷಯವಾದ ರೂಪವನ್ನು ಗ್ರಹಿಸುವಂತೆ ಮಾಡುವವನೂ ಪುರುಷನೇ ಆಗಿದ್ದಾನೆ. ದೇಹರೂಪವಾದ ಪುರುದಲ್ಲಿ ಪವಡಿಸಿರುವವನೇ ಎಲ್ಲ ಕಾರ್ಯಗಳಿಗೆ "ಕರ್ತೃ" ಎನಿಸಿದ್ದಾನೆ.21 "ಸ ಹಿ ಸರ್ವಕರ್ತಾ" ಉಕ್ತಿಯನ್ನು ಇಲ್ಲಿ ಸ್ಮರಿಸಬಹುದು. ಹೀಗೆ ಪುರುಷರೂಪದ ಭಗವಂತನ ಚಿಂತನೆ ಮಾಡಬಹುದಾಗಿದೆ.

ಪುರುಷ ಪ್ರಕೃತಿ. ವಿಶ್ವದ ದಂದ್ವಗಳು. ಪ್ರಕೃತಿಗೆ ಪುರುಷಬೇಕು. ಪುರುಷನಿಗೆ ಪ್ರಕೃತಿ ಸಾಕು. ಪ್ರಕೃತಿಗೆ ಪುರುಷನ ಆಹ್ವಾನ.

ಪುರುಷನಿಗೆ ಪ್ರಕೃತಿಯಲ್ಲಿ ಆಹ್ವಾನ. ಪುರುಷನಿಂದ ಪ್ರಕೃತಿಯ ಆಸ್ವಾದ. ಪ್ರಕೃತಿಯಿಂದ ಪ್ರತಿಕೃತಿಗಳ ನಿರ್ಮಾಣ. ಪುರುಷ ಪ್ರಕೃತಿ ದ್ವಂದ್ವಗಳು. ಇವು ಆದಿಮೂಲ. ಜಗದ ಹುಟ್ಟು ಇವರ ಸೃಷ್ಟಿ. ಜೀವರ ಜೀವನಕ್ಕೆ ಇವರೇ ನಾಂದಿ. ಬದುಕಿಗೆ ಇವರೇ ನಾಂದಿ. ಬದುಕಿಗೇ ಇವರೇ ಹಾದಿ. ಪುರುಷ "ಈಶಾವಾಸ್ಯ" ಎಲ್ಲೆಡೆ ವ್ಯಾಪ್ತ. ಪ್ರಕೃತಿ ಅವನ ಒಡನಾಡಿ ಅದುವೆ ಶ್ರೀಲಕ್ಷ್ಮೀತತ್ವ. ನಾರಾಯಣ (ಪುರುಷ) ಪ್ರಕೃತಿ (ಲಕ್ಷ್ಮಿ) ಈ ದ್ವಂದ್ವ ಒಂದು. ಒಂದರಲ್ಲಿ ಎರಡಿದ್ದೀತು. ಎರಡು ಒಂದೆ ಆಗಿದ್ದವು. ಒಂದು ಎರಡಾಯಿತು.22

"ಶ್ರಿಯಃ ಸೂಕ್ತಂ" ಶ್ರೀಸೂಕ್ತವಾಗಿದೆ. ಲಕ್ಷ್ಮೀಯ ತತ್ವವನ್ನೆ 15 ಮಂತ್ರಗಳಿಂದ ವರ್ಣಿಸುತ್ತದೆ. ಋಗ್ವೇದ ಪಂಚಮ ಮಂಡಲದ ಖಿಲಸೂಕ್ತವೆಂದು ಪ್ರಸಿದ್ಧವಾಗಿರುತ್ತದೆ. ಇಲ್ಲಿ "ಜಾತವೇದಃ" ಅಂದರೆ ನಾರಾಯಣ ತಂದೆಯಿಂದ ತಾಯಿ ಹತ್ತಿರ ಹೋಗುವುದೇ ಶ್ರೀ–ಸೂಕ್ತದ ವೈಶಿಷ್ಟ್ಯವಾಗಿರುತ್ತದೆ.23 ಪ್ರಕೃತಿಯೆಂಬುದು "ಪ್ರ" ಉಪಸರ್ಗದೊಂದಿಗೆ ಕೃತಿ ಶಬ್ದದಿಂದ ಒಡಗೂಡಿದೆ. "ಪ್ರ" ಎಂದರೆ ಪ್ರಕೃಷ್ಟವಾದ (ಶ್ರೇಷ್ಠವಾದ) ಕೃತಿ "ನಿಯಾಮಕ" ಸತ್ವಘಿ, ರಜೋ, ತಮೋ ಈ ರೀತಿ ಮೂರು ಗುಣಗಳಿಂದ ಕೂಡಿದ ರೂಪವೆ ಪ್ರಕೃತಿ. ಅದುವೆ ಲಕ್ಷ್ಮೀ ತತ್ವವಾಗಿದೆ. ಪ್ರಕೃತಿ ಪುರುಷ, ವಿಷ್ಣು ಲಕ್ಷ್ಮೀ, ಎರಡೂ ಎಲ್ಲವನ್ನೂ ಕೊಡುವವು. ಮಾಡುವವು, ಕಾಪಾಡುವವು, ಕೊಲ್ಲುವವು, ಅಂತೆಯೇ ಇವೆರಡೂ ಬ್ರಹ್ಮ. ಪುರುಷ "ಪರಬ್ರಹ್ಮ! ಪ್ರಕೃತಿ" ಮಹದ್‌ಬ್ರಹ್ಮ. ಇದು ವೇದ, ಗೀತೆಯ ಮಾತು. ಪುರುಷ ತನ್ನ ಶಕ್ತಿಯ ಅಭಿವ್ಯಕ್ತಿಗೆ ಪ್ರಕೃತಿಯನ್ನು ಮಾಧ್ಯಮವಾಗಿರಿಸಿದ. "ಪ್ರಕೃತಿಃ ಸೂಯತೆ ಸ ಚರಾಚರಮ್" ಎಂದು ಗೀತಾ. ಜಡ, ಚೇತನವೆಲ್ಲ ಪ್ರಕೃತಿಯ ಸಂತಾನ. ವಿಶ್ವದ ಹಸಿರು ಈ ಪ್ರಕೃತಿಯ ಬಸಿರು. ಇದು ಜಡಪ್ರಕೃತಿ. ಇವಳದ್ದು ಸದಾ ತುಂಬಿದ ಒಡಲು. ಅಂತೆಯೇ ಎಲ್ಲರ ಒಡಲು ತುಂಬುವಳು. ಜಗಕೆ ಇವಳೇ ಇಂಬು. ಆದ್ದರಿಂದ ಜಗದ ಅಂಬಾ. ಅಂಬುಜಳು. ಪ್ರಕೃತಿ ಇಲ್ಲದೇ ಯಾರ ಬದುಕೂ ಇಲ್ಲ. ಬದುಕಿಕೆ ಇವಳೇ ಆಧಾರ. ಏನು ಬಿಟ್ಟರೂ ಇವಳನ್ನು ಬಿಟ್ಟಿರಲಾರರು. ಶ್ರೀಕೃಷ್ಣನಿಗೆ ಒಮ್ಮೆ ಅಗ್ರಪೂಜೆ ರಾಯಸೂಯದಲ್ಲಿ, ಕೃಷ್ಣ ಮಡದಿ ಇವರಿಗೆ ಮನೆಮನದಲ್ಲಿ ನಿತ್ಯ ಅಗ್ರಪೂಜೆ. ಶುಕ್ರವಾರ ಇವಳದ್ದು. ದೀಪಾವಲಿ, ನವರಾತ್ರಿ, ಶ್ರಾವಣ ಇವಳದ್ದೇ ಹಬ್ಬ. ಎಲ್ಲರ ಬದುಕನ್ನು ನಿತ್ಯಹಬ್ಬ ಮಾಡಿದವಳು ಈ ಮಹಾಲಕ್ಷ್ಮೀ. "ನಾನೇ" "ನಾನು" ಎಂದು ಬೀಗಿದವರೂ ಇವಳಿಗೆ ಬಾಗುವವು. ಎಲ್ಲರ ಇರುವಿಕೆ, ಇಳಿಯುವಿಕೆ ಇವರ ಕಟಾಕ್ಷದಿಂದ. ಇವಳಿದ್ದರೆ ಎಲ್ಲವೂ. ಅಂತೆಯೇ ಇವಳು ಎತ್ತರದ ಅಮ್ಮ, ಎಲ್ಲರ ಅಮ್ಮ, "ಎಲ್ಲಮ್ಮ". ಅಂತೆಯೇ ಎಲ್ಲರೂ ಇವಳನ್ನೇ ಕರೆಯುವರು. ಕೂಗುವರು "ಭಾಗ್ಯದಾ ಲಕ್ಷ್ಮೀ ಬಾರಮ್ಮಾ, ನಮ್ಮಮ್ಮಾ ನೀ ಸೌಭಾಗ್ಯದಾ ಲಕ್ಷ್ಮೀಬಾರಮ್ಮಾ" "ಬಾರಮ್ಮ ಸಿರಿಯೇ" "ಬಾರೇ ಭಾಗ್ಯದ ನಿಧಿಯೇ" ಎನ್ನುವರು ಹರಿದಾಸರು. ಅತಿದೊಡ್ಡ ಕಾರಣ ಶಕ್ತಿ ಪುರುಷ. ಪರತತ್ತ್ವ ಪರಬ್ರಹ್ಮದೇವರು. ಅತಿದೊಡ್ಡ ಕಾರ್ಯಶಕ್ತಿ ಚೇತನ ಪ್ರಕೃತಿ. ಜಡಪ್ರಕೃತಿ. ಇದೇ ಮಹಾಲಕ್ಷ್ಮಿ. ಇದು ಅವ್ಯಕ್ತ. ಎಲ್ಲವೂ ತುಂಬಿದೆ ಇವಳಲ್ಲಿ. ಆದರೆ "ಅವ್ಯಕ್ತ" ಕಾಣದ ಶಕ್ತಿ. ಕಾಣುವಂತೆ ಮಾಡುವವಳು ಇವಳೇ. ಅದಕ್ಕೆ "ಅವ್ಯಕ್ತ" ಇವಳ ಹೆಸರು. ಅಂತೆಯೇ ಎಲ್ಲರದೂ ಇವಳೆಡೆಗೆಯೇ ಲಕ್ಷ್ಯ. ಆಕರ್ಷಣೆ ಇವಳ ಮುಖ್ಯ ಲಕ್ಷಣ. ಆದ್ದರಿಂದ ಇವಳು "ಲಕ್ಷ್ಮೀ". ಎಲ್ಲರನ್ನು ಹೊತ್ತು, ಹೆತ್ತು, ಸದಾ ಮತ್ತೆ ಹೊತ್ತಿರುವಳು. ಅದಕ್ಕೆ ಜಗನ್ಮಾತಾ. ಮಹಾಮಾತಾ. ಮಹಾಮಾಯಿ, "ಪುರುಷ" ಪ್ರಕೃತಿ "ಗಂಡುಹೆಣ್ಣು" "ವಿಷ್ಣು ಲಕ್ಷ್ಮೀ" ರೂಪದಿಂದ, ಗುಣದಿಂದ ಅಸಮರು. ಇದು ಸಹಜತೆ. ಇದು ನಿಸರ್ಗ. ಆದರೂ ಸದಾ ಕೂಡಿರುವವು. ಆದ್ದರಿಂದ ಸಮರು. ಅಂತೆಯೇ "ಸಮಾಸಮಳು" 'ಸಮನಾ' ಎನ್ನಿಸುವಳೇ ಮಹಾಲಕ್ಷ್ಮಿ.24 ಅಂತೆಯೇ ಸೀಪುರುಷರಲ್ಲಿ ಅನೇಕ ಸಮಾನತೆ ಇವೆ. ಅಸಮಾನತೆ ಇವೆ. ಇದೇ ವಿಶ್ವದ ಸಹಜತೆ. ಸಮತೆ, ಸಮಾನತೆ ಬಹಿರಂಗ. ವಿಷಮತೆ, ಅಸಮಾನತೆ ಅಂತರಂಗ. ಅಂತೆಯೇ ಸೂತ್ರ "ಸಮನಾ" ಎಂದಿತು. ಪುರುಷ ಶಕ್ತಿಮಾನ್. ಲಕ್ಷ್ಮೀಮಹಾಶಕ್ತಿ. ಪುರುಷ ವಿದ್ಯುತ್. ಪ್ರಕೃತಿ ಬೆಳಕು. ಇವರಿಬ್ಬರದು ಬಿಡದ ನಂಟು. ಬಿಡಿಸಲಾಗದ ಗಂಟು. ಅವಳಿದ್ದಲ್ಲಿ ದೇವರು, ದೇವರಿದ್ದಲ್ಲಿ ಅವಳು. ಇದು ಅವರ ಸಾಂಗತ್ಯ.

"ದ್ವಿಧಾಕೃತ್ವಾ ಆತ್ಮನೋದೇಹಂ ಅರ್ಧೇನ ಪುರುಷೋಭವತ್ ಅರ್ಧೇನ ನಾರೀ....|| –ಮನುಸ್ಮೃತಿ 1–32

ಒಂದೇ ದೇಹ, ಒಂದು ಶಕ್ತಿ ಎರಡಾಗಿ ವಿರಾಟಕ್ಕೆ ಜನ್ಮನೀಡಿದವು. ಈ ಅರ್ಧನಾರೀ ನರರು, ಪ್ರಕೃತಿ ಪುರುಷರು. ಈ ಪ್ರಕೃತಿ ಮಹಾಲಕ್ಷ್ಮೀದೇವಿ. ಎರಡು ಚೇತನ ಒಂದಾದರೂ ಎರಡು ಎರಡೇ. ಪುರುಷನಿಂದ ಭಿನ್ನ. ಆದರೆ ಪುರುಷಾಧೀನ ಈ ಪ್ರಕೃತಿ. ಲಕ್ಷ್ಮೀಚೇತನ. ಪುರುಷಶಕ್ತಿಯ ವಿರಾಟ್‌ರೂಪ. ಪುರುಷನ ಎಲ್ಲ ಕಾರ್ಯಗಳ ಸದಾ ಸಂಗಾತಿ. ಸಹಕಾರಿ. ಎರಡೂ ಕೂಡಿ ಆಡಿದ ಆಟ. ಮಾಡಿದ ಲೀಲೆ, ತೋರಿದ ವೈಭವ ಈ ವಿಶ್ವಪ್ರಪಂಚ. ಮಹಾಲಕ್ಷ್ಮೀ ಚಿದ್ರೂಪಳು. ಅಪ್ರಾಕೃತಳು. ಜಡಕ್ಕೆ ಒಡೆಯಳು. ಜಡಳಲ್ಲ. ಜಡವನ್ನು ಆಡಿಸುವಳು. ಓಡಿಸುವಳು, ಕೂಡಿಸುವಳು. ಕಡೆಗೆ ಬಯಲು ಮಾಡುವಳು. ಇವಳು ಬಹುರೂಪಿ. ಮಹಾಲಕ್ಷ್ಮೀ. ಇದು ಅವಳ ಅರಿವು. "ಸಾತ್ವಿಕಸ್ಯ ಜ್ಞಾನಶಕ್ತಿ, ರಾಜಸಸ್ಯ ಕ್ರಿಯಾತ್ಮಿಕಾ, ದ್ರವ್ಯಶಕ್ತೀತಾಮಸಸ್ಯ" ಇವು ತ್ರಿಗುಣಶಕ್ತಿ.

**ಪ್ರಕೃತಿ ಲಕ್ಷ್ಮೀ ಜಿಜ್ಞಾಸಾ**

"ಜಿಜ್ಞಾಸೆ" ಅರಿವು. ಅರಿವು ಮೂರು ಬಗೆ. ವ್ಯಕ್ತಿಯ ಸ್ವರೂಪ. ಅವರ ಸಾಧನೆ, ಅವರು ಪಡೆದ ಲ. ಅವರಿಗಾಗಿ ನಮ್ಮ ಸಾಧನೆ. ನಮಗೆ ದೊರೆವ ಲ. ಇದು ಜಿಜ್ಞಾಸೆ. ಲಕ್ಷ್ಮೀದೇವಿಯ ಅರಿವಿಗೆ ಆಧಾರ ವೇದಗಳು. ಉಪನಿಷತ್ತು, ಪಂಚರಾತ್ರ, ರಾಮಾಯಣ, ಮಹಾಭಾರತ, ಭಾಗವತಾದಿ ಎಲ್ಲ ಪುರಾಣಗಳು, ಬ್ರಹ್ಮಸೂತ್ರ, ಭಗವದ್ಗೀತೆ, ಸ್ಮೃತಿಗಳು, ಎಲ್ಲ ದರ್ಶನಗಳು, ಮತಗಳು, ದಾಸಸಾಹಿತ್ಯ, ಜಾನಪದ ಜೀವನ ಸಾಹಿತ್ಯ, ಸಂಪ್ರದಾಯ, ಶ್ರದ್ಧೆ, ದೇವಪೂಜಾ ಆಚರಣೆಗಳೇ ಲಕ್ಷ್ಮೀಜ್ಞಾನಕ್ಕೆ ಆಧಾರ. ಆಕರಗಳು ಇದು ಲಕ್ಷ್ಮೀ ಸಾಹಿತ್ಯ. ಭಾರತೀಯ ವಾಙ್ಮಯ.

## ಲಕ್ಷ್ಮೀ ಸ್ವರೂಪ

ಪತಿಯಿಂದ ಸದಾ ಕೂಡಿರುವ ಪತ್ನಿ. ಪತಿಗೆ ಸಮಳು. "ಶ್ರೀರಪಿ ಅಖಿಲ ಶಬ್ದೋಕ್ತಾ" "ವೇದೈಶ್ಚ ಸರ್ವೈಃ ವೇದ್ಯಾ" ಮಹಾ–ಲಕ್ಷ್ಮೀಯನ್ನು ಸಮಗ್ರ ಶಬ್ದ ಪ್ರಪಂಚ ವರ್ಣಿಸುವುದು. ಎಲ್ಲ ಶಬ್ದಗಳು ಅವಳ ನಾಮ. ಅನಂತ ವೇದಗಳೂ ಅವಳ ಗಾಥಾ. ಆಧ್ಯಾತ್ಮಿಕ ವಾಙ್ಮಯವೆಲ್ಲ ಅವಳ ಚರಿತ್ರೆ ಕಾವ್ಯ. "ಲಯೇ ವಾಪ್ಯಥವಾ ಸೃಷ್ಟೌ ಅಂತರಾಲೇಪಿ ನಕ್ವಚಿತ್ ಪ್ರಕೃತ್ಯಾ ರಹಿತಂ ಬ್ರಹ್ಮ" ಪರಬ್ರಹ್ಮ ತಾನು ಗೈಯುವ ಪ್ರಲಯ, ಸೃಷ್ಟಿ, ಮಧ್ಯದ ಯಾವುದೇ ಕ್ಷಣ, ಕಾರ್ಯ ಇವಳಿಲ್ಲದೇ ಮಾಡುವುದಿಲ್ಲ. ಇದು ಇವಳ ಹಿರಿಮೆ. ವಿಶ್ವವೇ ಮಹಾಮನೆ. ಪ್ರಪಂಚ ಒಂದು ಕುಟುಂಬ. ಮಹಾಲಕ್ಷ್ಮೀ ಈ ಮನೆಯ ಮಹಾತಾಯಿ. ವಿಶ್ವ ಅವಳ ಕುಟುಂಬ. ವಿಶ್ವಕುಟುಂಬಿನಿ. "ಮಾತಾಚ ಕಮಲಾದೇವಿ ಪಿತಾದೇವೋ ಜನಾರ್ದನಃ" ಇದು ಅವಳ ಸ್ವರೂಪ. ಅನಂತಜೀವರು ಅವಳ ಮಕ್ಕಳು. ಮಕ್ಕಳು ಅವಳಿಗೆ ಮೆಚ್ಚು. ಮಕ್ಕಳಿಗೆ ಈ ತಾಯಿ ಅಚ್ಚುಮೆಚ್ಚು. ಆದ್ದರಿಂದ "ಮಾತೃದೇವೋ ಭವ" ತಾಯಿಯೇ ದೇವರೆಂದು ವೇದ. ಎದ್ದರೂ ಬಿದ್ದರೂ, ಎಲ್ಲ ನೋವು ನಲಿವುಗಳಲ್ಲಿ "ಅವ್ವಾ" "ಅಮ್ಮಾ" ಎಂದು ಮೊದಲ ಧ್ವನಿ. ಎಲ್ಲರಿಗೂ ಸದಾ ಇವಳ ನೆನಪು! ವಿಶ್ವ ಇವಳನ್ನು ತಾಯಿಯ ರೂಪದಲ್ಲಿ ಕಾಣುವುದು. ದೇವರು ತಾಳಿದ ತಾಯಿರೂಪ ಇವಳು. ಇವಳಲ್ಲಿ ದೇವ. "ರಮಾದಿನಿಷ್ಠ ರಮಾದಿ ನಾಮಕ" ಎನ್ನುವರು ಶ್ರೀರಾಘವೇಂದ್ರರು. ಹರಿಯ ಪ್ರತಿಬಿಂಬ ಇವಳು. ಇವಳ ಪ್ರತಿಬಿಂಬ ವಿಶ್ವದ ಸೀಯರು. ಸೀದೇವತೆಗಳು. ಇವಳು ಅವಳ ಬಿಂಬಳು. ಪ್ರಕೃತಿಯ ರೂಪದಿಂದ ಕಣ್ಣಿಗೆ ಕಾಣುವ ಪ್ರತ್ಯಕ್ಷ ದೇವತೆ. "ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" ಇದು ಇವಳ ವಿಶ್ವರೂಪ. ಪ್ರತಿಚೇತನಕ್ಕೂ ಇವಳ ಸಂಬಂಧ. ಇದೇ ಪ್ರಕೃತಿಬಂಧ. ಇವಳಲ್ಲಿದೆ ಬಂಧಕಶಕ್ತಿ. ಬಂಧನದ ಬಿಡುಗಡೆಯೂ ಇವಳಿಂದ. ಇವಳು ಬ್ರಹ್ಮಾದಿ ಎಲ್ಲ ದೇವತೆಗಳ ತಾಯಿ. ವಿಶ್ವದ ಒಡತಿ. ಹಗಲು ರಾತ್ರಿಗಳಿಗೆ ದೇಶ, ಕಾಲಗಳಿಗೆ ಇವಳೇ ಒಡತಿ. ರಾತ್ರಿಸೂಕ್ತ ರಕ್ಷಣೆಗಾಗಿ ಇವಳನ್ನು ಪ್ರಾರ್ಥಿಸುವುದು. ಲಕ್ಷ್ಮೀ ಚಪಲಾ, ಚಂಚಲಳು. ಎಲ್ಲಿಯೂ ಸ್ಥಿರವಾಗಿರುವುದಿಲ್ಲ. ಸಂಪತ್ತಿನಿಂದ ಏರಿದವರನ್ನು ಇಳಿಸುವಳು. ಇಳಿದವರನ್ನು ಏರಿಸುವಳು. ಇವಳು ಬರುವ ಸುಳಿವೂ ದೊರೆಯದು, ಹೋಗುವ ಬಗೆ ತಿಳಿಯುವುದೇ ಇಲ್ಲ. ಅವಳ ಈ ಕಾರ್ಯದ ಅನುಭವ ಎಲ್ಲರಿಗೂ ಇರುವುದು. ಇದು ಅವಳ ಗುಣವೇ. ಆದರೂ ಲಕ್ಷ್ಮೀದೇವಿ ಚಂಡಿ, ಮಿತಿ ಇಲ್ಲದ ಅಪಾರಶಕ್ತಿಗೆ ಚಂಡ ಎನ್ನುವರು. ಇವಳದ್ದೂ ಅಪರಿಮಿತ ಶಕ್ತಿ. ಅಂತೆಯೇ ಚಂಡಿ, ಚಂಡಿಕಾ (ಚಂಡಿ=ಕೊಪೇ) ಸಿಟ್ಟಿಗೆ ಇವಳು ಅಭಿಮಾನಿ. ಈ ದುರ್ಗೆಯಿಂದ ಹುಟ್ಟಿದ್ದು ಸಿಟ್ಟು. ಅಂತೆಯೇ ದೇವತೆಗಳಿಗೆ ಅವಳ ಅಂಜಿಕೆ. "ಭೀಷಾಸ್ಮಾದ್ ವಾತಃ ಪವತೇ" ಗಾಳಿ ಬೀಸುವುದು, ಸೂರ್ಯ ಬರುವುದು, ಎಲ್ಲ ಇವಳ ಭಯದಿಂದ ಇವಳು ಚಂಡಿಕಾ. ಇವಳು ಹರಿಪ್ರಿಯಾ. "ಸರ್ವೇಭ್ಯೋಪಿ ಪ್ರಿಯತಮಾಹರೇಃ" ಎಲ್ಲರಿಗಿಂತ ಹರಿಗೆ ಅತಿ ಮೆಚ್ಚಿನವಳು. ಇವಳ ಪ್ರೀತಿಗಾಗಿ ಹರಿಯು ವಿಶ್ವದ ಸೃಷ್ಟಿ ಮಾಡುವ. "ಮಮಭರ್ತುಃ ಏತಾದೃಶ ಮಹಿಮಾವಾನ್" ನನ್ನ ಗಂಡನ ಮಹಿಮೆ, ಹಿರಿಮೆ ಇಷ್ಟು ಅದ್ಭುತವೆಂದು ತಿಳಿದು ಹರ್ಷಿಸಲು ತನ್ನ ಎಲ್ಲ ಕಾರ್ಯ ಲಕ್ಷ್ಮಿಯ ಸಂತೋಷಕ್ಕಾಗಿಯಂತೆ ಎನ್ನವರು ವಾದಿರಾಜರು. ಇದು ಜಗಕೆ ಶಿಕ್ಷಣ ಪ್ರಯೋಜನಕ್ಕಾಗಿ ಪ್ರೀತಿ ಅಲ್ಲ. ಪ್ರೀತಿಯೇ ಪ್ರಯೋಜನ. ಅವಳು "ವಿಶ್ವಪ್ರಿಯೇ, ವಿಶ್ವಮನೋನುಕಲೇ" ಎಂದು ಋಗ್ವೇದ. ಇದು ಲಕ್ಷ್ಮಿಯ ಸ್ವರೂಪ. ಇವಳು "ಯೋಗಮಾಯಾ". ಇವರದ್ದು ಮಾಸದ ಪ್ರೀತಿ. ಮುರಿಯದ ಬಂಧ. ಮುನಿಸಿಲ್ಲದ ಮನಸು. ಹುಸಿಯಾಗದ ಹರೆಯ! ಕಳೆಗುಂದದ ಶಕ್ತಿ. ಆರದ ತೇಜ. "ಶ್ರೀಯಂ ವಸಾನಾ ಅಮೃತತ್ತ್ವ ಮಾಯಾನ್" ಭಕ್ತರಿಗೆ ಮೋಕ್ಷ ಕೊಡುವ ಸಾಮರ್ಥ್ಯ. ಇವಳು ಬಂಧಕಳು. ಮೋಚಕಳು. ಮೋಕ್ಷಕ್ಕೂ ಬೇಕು ಮಹಾಲಕ್ಷ್ಮೀ. ಅವಳೇ ಶ್ರೀಸೂಕ್ತ ಪ್ರತಿಪಾದ್ಯ ಪ್ರಕೃತಿ ಮಹಾಲಕ್ಷ್ಮಿ.

## Foot Noots

1. ಯಥಾ ಹಿ ಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ ನ ತಥಾ ಸರ್ವ ವೇದಾಶ್ಚ ವೇದಾಂಗಾನಿ ಚ ನಾರದ ||

–ಶ್ರೀಬ್ರಹ್ಮಸೂತ್ರಭಾಷ್ಯ 1–2–26

2. ತಸ್ಮಿನ್‌ಕಾಲೇ ಮಹಾರಾಜ ರಾಮ ಏವಾಭಿದೀಯತೇ ಯಥಾ ಹಿ ಪೌರುಷೇ ಸೂಕ್ತೇ ವಿಷ್ಣುರೇವಾಭಿಧೀಯತೇ ||

–ಶ್ರೀಬ್ರಹ್ಮಸೂತ್ರಭಾಷ್ಯ 1–2–23

3. ಪುರುಷಾನ್ನ ಪರಂ ಕಿಂಚಿತ್ (ಕಾಠಕೋಪನಿಷತ್)
4. ತಸ್ಮಾದ್ ವಿರಾಳಜಾಯತ ವಿರಾಜೋ ಅಧಿಪೂರುಷಃ ||
5. ವಿಷ್ಣೋಸ್ತು ಪುರುಷಾಖ್ಯಾನಿ ತ್ರೀಣಿ ರೂಪಾಣ್ಯತೇ ವಿದುಃ ಪ್ರಥಮಂ ಮಹತಃ ಸೃಷ್ಟೃ ದ್ವಿತೀಯಂತ್ವಂಡಸಂಸ್ಥಿತಂ ||
   ತೃತೀಯಂ ದೇಹಿನಾಂ ದೇಹೇ ತಾನಿ ಜ್ಞಾತ್ವಾ ವಿಮುಚ್ಯತೇ || ಇತಿ || ಮಾತ್ಸ್ಯೇ ||
6. ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ಉತಾ ಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ||

ಪು.ಸೂಕ್ತ. ಮಂ–2

ಏತಾವಾನಸ್ಯ ಮಹಿಮಾತೋಜ್ಯಾಯಾಂಶ್ಚ ಪುರುಷಃ ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ||–ಪು.ಸೂಕ್ತ. ಮಂ–3

ನಮಃ ಪರಸ್ಮೈ ಪುರುಷಾಯ ಭೂಯಸೇ ಸಮದ್ಭವಸ್ಥಾನ ನಿರೋಧ ಲೀಲಯಾ ಗೃಹೀತ ಶಕ್ತಿತ್ರಿತಯಾಯ ದೇಹಿನಾಂ ಅಂತರ್ಧ್ರುವಾಯಾನುಪಲಭ್ಯವರ್ತ್ಮನೇ ॥ –ಭಾಗವತ 2–4–12

7. ಆದ್ಯೋವತಾರೋ ವಿಷ್ಣೋಸ್ತು ಪುರುಷೋ ನಾಮಕೀರ್ತತಃ ಅಸೃಜತ್ ಸ ಮಹತ್ತತ್ತ್ವಂ ಸ ಏವಾಂಚಂ ಸಮಾವಿಶತ್

ಸ ಬ್ರಹ್ಮಣೋ ಹೃದಿಸ್ಥತ್ವಾತ್ ಹ ಖುದಯಂ ಚೇತಿ ಕೀರ್ತ್ಯತೇ ॥ –ಶ್ರೀಭಾಗವತ ತಾತ್ಪರ್ಯ 3–2–8

1. ಪೂರ್ಷು ಶರೀರೇಷು ಪುರಿ ಹೃದಯಾಖ್ಯಪತ್ತನೇ ಶೇತೇ ಅಸ್ತಿ ಇತಿ ಪುರುಷಃ ॥

2. ಪುರುಶ್ಚಕ್ರೇ ದ್ವಿಪದಃ ಪುರುಶ್ಚಕ್ರೇ ಚತುಷ್ಪದಃ ಪುರಃ ಸ ಪಕ್ಷೀಭೂತ್ವಾ ಪುರಃ ಪುರುಷ ಆವಿಶದಿತಿ ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯಃ ॥ –ಬೃಹದಾರಣ್ಯಕೋಪನಿಷತ್ (4–5–18)

3. ನವದ್ವಾರಂ ಪುರಂ ಪುಣ್ಯಂ ಏತೈರ್ಭಾವೈಃ ಸಮನ್ವಿತಮ್

ವ್ಯಾಪ್ಯ ಶೇತೇ ಮಹಾತ್ಮಾ ಯಃ ತಸ್ಮಾತ್ ಪುರುಷ ಉಚ್ಯತೇ ॥ –ಮಹಾಭಾರತ ಶಾಂತಿಪರ್ವ (210–37)

4. ಪುರುಷತ್ವಗುಣವತ್ವಾತ್ ಪುರುಷಃ ॥ ಶ್ರೀವಾದಿರಾಜೀಯ ಪುರುಷಸೂಕ್ತ ವ್ಯಾಖ್ಯಾನ.

5. ಪುರ್ ಅಗ್ರಗಮನೇ, ಇತ್ಯತಃ ಪುರುಷಃ ಸೃಷ್ಟೇಃ ಪ್ರಾಗ್ವಿದ್ಯಮಾನಃ –ಶ್ರೀಸತ್ಯಸಂಧೀಯ ವ್ಯಾಖ್ಯಾನ.

6. ಪುರುರ್ಬಹುಲಃ ಷಃ ಚೇಷ್ಟಾ ಯಸ್ಯ ಸಃ ಪುರುಷಃ ಷಕಾರಃ ಪ್ರಾಣ ಆತ್ಮೇತಿ ಶ್ರೇತೇಃ ॥ –ಶ್ರೀ ಸತ್ಯಸಂಧೀಯವ್ಯಾಖ್ಯಾನ

7. ಪುರೂನ್ ಬಹೂನ್ ದೈತ್ಯಾನ್ ಸ್ಯತಿ ನಾಶಯತೀತಿ ಪುರುಷಃ ಷೋ ಅಂತಕರ್ಮಣಿ.

8. ಪುರು ಪೂರ್ಣಂ ಮೋಕ್ಷಾಖ್ಯಂ ಲಂ ಸ್ವಾತ್ಮಾನಮೇವ ಸನೋತಿ ದದಾತಿ ಇತಿ –ಶ್ರೀಸತ್ಯಸಂಧೀಯವ್ಯಾಖ್ಯಾನ

9. ಪುರವಃ ಪೂರ್ಣಾಃ ಷಾಃ ಷಡ್ಗುಣಾಃ ಯಸ್ಯ ಸಃ ಪುರುಷಃ –ಶ್ರೀ ವಾದಿರಾಜೀಯ ವ್ಯಾಖ್ಯಾನ

10. ಪುರಂ ಓಷತಿ ದಹತೀತಿ ಪುರುಷಃ ॥'ಉಷ ದಾಹೇ'

11. ಪುರು ಬಹುಲಂ ಸನೋತಿ ದದಾತೀತಿ ಪುರುಷಃ "ಷಣು ದಾನೇ"

12. ಪ್ರಿಯತೇ ಪೂರ್ಯತೇ ಗುಣೈರಯಮಿತಿ ಪುರುಷಃ ಪೃ ಪಾಲನಪೂರಣಯೋಃ

13. ಪ್ರಜಾಭಿಃ ಜಗತ್ ಪೃಣಾತಿ ಪೂರಯತೀತಿ ಪುರುಷಃ ಪೃಪಾಲನಪೂರಣಯೋಃ

14. ಪೃಣಾತಿ ಸರ್ವಾನ್ ಪಾಲಯತೀತಿ ಪುರುಷಃ ಪೃಪಾಲನಪೂರಣಯೋಃ

15. ಪೃಣಾತಿ ಭಕ್ತಾನ್ ಗುಣೈಃ ಪೂರಯತಿ, ಸಾಧಯತಿ ಭಕ್ತಾನಾಂ ದೋಷಾನ್ ನಾಶಯತೀತಿ ಪುರುಷಃ (ಪೃಪೂರಣೇ, ಪದಲ್ಯ ವಿಶರಣಗತ್ಯವಸಾಧನೇಷು)

16. ಪುರು ಸರ್ವಂ ಪಾಪಜಾತಂ ಓಪತಿ ದಹತಿ ಇತಿ ಪುರುಷಃ ಉಷ ದಾಹೇ

17. ಪುರು ಬ್ರಹ್ಮ ಸರತಿ ಸಮ್ಯಗ್ ಜಾನಾತೀತಿ ಪುರುಷಃ ॥

ಸೃ ಗತೌ ಪುರು ಬ್ರಹ್ಮ ಗುಣಾಧಿಕ್ಯಾತ್ ತದ್‌ಜ್ಞಾನಾತ್ ಪುರುಷಃ ಸ್ಮೃತಃ ॥ –ಗೀತಾ (2–15)

18. ಪುರುಃ ಪೂರ್ಣಾಃ ಷಃ ಪ್ರಣೇತೃತ್ವಂ ವ್ಯಾಪ್ತತ್ವಂ ಚ ಯಸ್ಯ ಸಃ ಪುರುಷಃ ॥

19. ನವದ್ವಾರಂ ಪುರಂ ಪುಣ್ಯಮೇತೈರ್ಭಾವೈಃ ಸಮನ್ವಿತಮ್

ವ್ಯಾಪ್ಯ ಶೇತೇ ಮಹಾನಾತ್ಮಾ ತಸ್ಮಾತ್ ಪುರುಷ ಉಚ್ಯತೇ ॥ –ಶಾಂತಿಪರ್ವ 210 ಅ.

20. ಅಜರಃ ಸೋಮರಶ್ಚೈವ ವ್ಯಕ್ತವ್ಯಕ್ತೋಪದೇಶವಾನ್

ವ್ಯಾಪಕಃ ಸಗುಣಃ ಸೂಕ್ಷ್ಮಃ ಸರ್ವಭೂತಗುಣಾಶ್ರಯಃ ॥ –ಶಾಂತಿಪರ್ವ 210 ಅ

21. ಶ್ರೋತ್ರಂ ವೇದಯತೇ ವೇದ್ಯಂ ಸ ಶೃಣೋತಿ ಸ ಪಶ್ಯತಿ

ಕಾರಣಂ ತಸ್ಯ ದೇಹೋಯಂ ಸ ಕರ್ತಾ ಸರ್ವಕರ್ಮಣಾಮ್ ॥ –ಶಾಂತಿಪರ್ವ 210 ಅ.

22. ಸ ವೈ ನೈವರೇಮೆ ತಸ್ಮಾದೇಕಾಕಿ ನ ರಸಮೇತ "ಸ ದ್ವಿತೀಯಂ ಐಚ್ಚತ್॥ –ಬೃಹದಾರಣ್ಯಕ ಉ.1–1

23. ಜಾತವೇದೋ ಮ ಆವಹ ॥ –ಶ್ರೀಸೂಕ್ತ1

24. Lakshmi in Sanskrit is derived from the root word "laksha,lakshaa, Meaning to perceive, observe-know understand and Goal, aim.

**************